O.S.No.61/2018 DW-1

ದಿನಾಂಕ:06.01.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ಎಸ.ಎಚ್. ವಕೀಲರಿಂದ</u>**

ಪ್ರತಿವಾದಿಯ ಪ್ಲಾಟ ನಂ.9/1/10 ವಾದಿಯ ಸ್ವತ್ತಿನ ದಕ್ಷಿಣ ಭಾಗಕ್ಕೆ ಬರುತ್ತದೆ ಎಂದರೆ ಸರಿ. ನನ್ನ ಪ್ಲಾಟಿನ ಸರ್ವೆ ನಂ.74/7 ಇರುತ್ತದೆ. ನನ್ನ ಪ್ಲಾಟಿನ ಅಳತೆ ಹೇಳಲು ಆಗುವುದಿಲ್ಲ. ನಮ್ಮ ಸ್ವತ್ತಿನ ಪೂಃ ಖುಲ್ಲಾ ಜಾಗ, ಪಃ ವಾದಿಯ ಸ್ವತ್ತು, ಉಃ ರಸ್ತೆ, ದಃ ಗಣಪತಿ ಮಠ ಇರುತ್ತದೆ. ನನ್ನ ಸ್ವತ್ತಿನ ಉತ್ತರ ಭಾಗಕ್ಕೆ ವಾದಿಯ ಸ್ವತ್ತು ಇದೆ. ನನ್ನ ಸ್ವತ್ತಿನ ಚತು ಸೀಮೆಯನ್ನು ನನ್ನ ಪ್ರತಿವಾದಿ ಪತ್ರದಲ್ಲಿ ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಪ್ಲಾಟಿನ ಅಳತೆಯು ಬರೆದಿರುವ ಬಗ್ಗೆಯು ನನಗೆ ಗೊತ್ತಿಲ್ಲ. ಸರ್ವೆ ನಂ.74/1 ರಲ್ಲಿ ವಾದಿಯರ ಸ್ವತ್ತು ಇದೆ ಎಂದರೆ ಸರಿ. ನಾನು ನನ್ನ ಸ್ವತ್ತನ್ನು ಖರೀದಿ ಮಾಡುವ ಮೊದಲೇ ವಾದಿಯರು ಖರೀದಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ನಾನು ಅತಿಕ್ರಮಣ ಮಾಡಿ ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ವಾದಿಯ ಸ್ವತ್ತಿನ ನಡುವೆ ಇರುವೆ ಖಾಲಿ ಜಾಗವನ್ನು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ದಾವಾ ಸ್ವತ್ತನ್ನು ಅಳತೆ ಮಾಡಲು ನನ್ನದು ಯಾವುದೇ ತಕರಾರು ಇಲ್ಲ . ವಾದಿಯ 33X35' ಜಾಗವನ್ನು ಅತಿಕ್ರಮಣ ಮಾಡಿ ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ಸಮಯದಲ್ಲಿ ಮುಂದೂವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು .

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ